ಏನೋ ಭಯ... ಅನುಮಾನ... ಆತಂಕದಿಂದ ಚಡಪಡಿಸುತ್ತಿದ್ದಾನೆ.

ಅದೇ ಊರಿನ ಶ್ರೀಮಂತ ಬಂಗಲೆಯ ಕೊಠಡಿಯೊಂದರಲ್ಲಿ ರಾಜಾರಾಯರ ಮಗ ತನ್ನ ಪ್ರಿಯತಮೆ ರೂಪಾಳ ಬಗ್ಗೆ ಕನಸು ಕಾಣುತ್ತಿದ್ದಾನೆ. ಸ್ಮಶಾನದಲ್ಲಿ ಏನು ನಡೆಯುತ್ತಿದೆ?

* * *

ಅಗ್ನಿಕುಂಡ ಉರಿಯುತ್ತಿದೆ. ವಿಶಾಲವಾದ ಸ್ಮಶಾನದಲ್ಲಿ ತುಂಬಾ ದೂರದ ಅಂತರದಲ್ಲಿ ಎರಡು ಚಿತೆಗಳು ಉರಿಯುತ್ತಿವೆ. ನಿಶ್ಯಬ್ದತೆಯಲ್ಲಿ ಕೇಳಿಸುತ್ತಿದೆ ಮದಂತನ ಮಂತ್ರೋಚ್ಚಾರ. ದಿಗ್ಬಂಧನದ ಮಂತ್ರ. ಕ್ಷುದ್ರಶಕ್ತಿಯನ್ನು ಆಹ್ವಾನಿಸುವ ಮುನ್ನ ಮಾಂತ್ರಿಕನಾದವನು ದಿಗ್ಬಂಧನ ಮಾಡಿಕೊಳ್ಳುತ್ತಾನೆ. ಆತ್ಮರಕ್ಷಣೆಗೆ ಇದು ಅಗತ್ಯ. ಪಂಚ ಶಕ್ತಿಗಳು ಗುರು, ಚಂಡ, ಕಾಲ, ಕಾಪಾಲ ಮತ್ತು ರಕ್ತೋದರ. ಈಗ ರಕ್ತೋದರ ಎಂಬ ಕೊನೆಯ ಕ್ಷುದ್ರಶಕ್ತಿಯನ್ನು ಮದಂತ ಆಹ್ವಾನಿಸುತ್ತಿದ್ದಾನೆ.

ಅವನಿಗೆ ಇದು ಇಷ್ಟವಿಲ್ಲ. ಆದರೆ ವಿದ್ಯೆ ಕಲಿಸಿದ ಗುರುವಿನ ಆಜ್ಞೆಯಂತೆ ಪ್ರಯೋಗಿಸುತ್ತಿದ್ದಾನೆ. ಈ ಕ್ಷುದ್ರಶಕ್ತಿಯನ್ನು ಪ್ರಯೋಗಿಸುತ್ತಿರುವುದು ಹಸಿರು ಗಿಡಗಳ ರಾಮಯ್ಯನ ಮಕ್ಕಳ ಮೇಲೆ. ರಕ್ತ ಪಿಪಾಸು ಈ ಕ್ಷುದ್ರಶಕ್ತಿ. ಕ್ರೂರಿ ಬಲು ಕ್ರೂರಿ. ಪ್ರಚಂಡ ವೇಗದಲ್ಲಿ ಇಮ್ಮಡಿ ಕೋಪ ಮತ್ತು ಆವೇಶದಿಂದ ನುಗ್ಗಿ ಬರುತ್ತಾನೆ ರಕ್ತೋದರ! ಇಂತಹ ಕ್ಷುದ್ರಶಕ್ತಿಯಿಂದ ಆತ್ಮರಕ್ಷಣೆ ಮಾಡಿಕೊಳ್ಳಬೇಕಾದರೆ ಮಾಂತ್ರಿಕನಾದವನು ಮಹಾ ದಿಗ್ಬಂಧನವನ್ನು ಮಾಡಿಕೊಳ್ಳಬೇಕು.

ಅಷ್ಟದಿಗ್ಬಂಧನ... ದಶ ದಿಗ್ಬಂಧನ ಮತ್ತು ಮಹಾ ದಿಗ್ಬಂಧನ ಎಂಬ ಪ್ರಕಾರಗಳಿವೆ. ಮಹಾ ದಿಗ್ಬಂಧನವನ್ನು ಮಾಂತ್ರಿಕರು ಪಂಚ ಕ್ಷುದ್ರಶಕ್ತಿಗಳನ್ನು ಆಹ್ವಾನಿಸಿದರೆ ಮಾತ್ರ ಮಾಡುತ್ತಾರೆ. ಬೆತ್ತಲೆ ಶರೀರ ಬೀಸುತ್ತಿರುವ ಗಾಳಿಯಿಂದಾಗಿ ಕಂಪಿಸುತ್ತಿದೆ. ಒಂಟಿ ಕಾಲಿನಲ್ಲಿ ಊರ್ಧ್ವ ಬಾಹುವಾಗಿ ನಿಂತು ಈಗ ಆವಾಹನೆಯ ಮಂತ್ರವನ್ನು ಹೇಳುತ್ತಿದ್ದಾನೆ.

ಪ್ರಥಮ ಉರುಕ್ತಿ... ದ್ವಿಮಯ... ಕೊನೆಯ ಉಚ್ಚ ಸ್ವರವೇ ತ್ರಿಮಯ. ಕೊನೆಯ ಚರಣದ ಮಂತ್ರ ಹೇಳಿದ ಕೂಡಲೇ ಆಗಸದಲ್ಲಿ ಎರಡು ವಿರುದ್ಧ ದಿಕ್ಕುಗಳಿಂದ ಬಂದ ಮೋಡಗಳು ಘರ್ಷಿಸಿದವು. ಕತ್ತಲು... ಆಗಸದಲ್ಲಿ ಈಗ ನಕ್ಷತ್ರ ಕಾಣುತ್ತಿಲ್ಲ. ಶುಭ್ರವಾದ ಪಾತ್ರೆಗೆ ಮಸಿ ಬಳಿದಂತೆ ಕಾಣುತ್ತಿದೆ. ಮೋಡಗಳಿಂದ ಆವೃತವಾಗಿರುವ ಆಕಾಶ. ಪ್ರಕೃತಿಯಲ್ಲಿ ಬದಲಾವಣೆ. ರಕ್ತೋದರನ ಆಗಮನದ ಸಂಕೇತ. ವೈಭವ... ಮಹಾ ವೈಭವ. ಅಂತ್ಯವೇ ಇಲ್ಲದ ಅನಂತ ಆಕಾಶದಲ್ಲಿ ಎರಡು ಕಡೆಗಳಿಂದ ಮಿಂಚುಗಳು ಮೂಡಿದವು.

ಧಿಗ್ಗನೆ ಬೆಳಗಿತು ಆಕಾಶ. ಬರಸಿಡಿಲ ಬಡಿತದ ಶಬ್ದ. ಇಡೀ ಸ್ಮಶಾನ ಕಂಪಿಸಿತು. ಪ್ರಶಾಂತವಾಗಿದ್ದ ಸಮಾಧಿಯೊಂದು ಕದಲಿತು. ಮೆಲ್ಲಗೆ ಬಿರುಕು ಮೂಡಿತು. ವಿಚಿತ್ರ ರೀತಿಯ ಕಲರವ. ನಗು... ಕೇಕೆ... ಅಬ್ಬರ. ಅಗೋಚರ ರೂಪದಲ್ಲಿರುವ ಪ್ರೇತ, ಪಿಶಾಚಿಗಳು ಕ್ಷುದ್ರಶಕ್ತಿಯನ್ನು ಸಡಗರ ಮತ್ತು ಸಂಭ್ರಮದಿಂದ ಸ್ವಾಗತಿಸುತ್ತವೆ. ಬೀಸುತ್ತಿರುವ ಪ್ರಚಂಡ ಗಾಳಿ. ತರಗೆಲೆ, ಮಣ್ಣು ತೂರಿಕೊಂಡು ಬಂದು ಮಾಂತ್ರಿಕರುಗಳ ದೇಹದ ಮೇಲೆ ಅಪ್ಪಳಿಸುತ್ತಿವೆ. ಆಗ... ಆಗ ಕಂಡಿತು, ಅಂತರಿಕ್ಷದಲ್ಲಿ ಕೆಂಪು ಜ್ವಾಲೆ. ಗಿರಗಿರನೆ ತಿರುಗುತ್ತಿದೆ. ಪೊರಕೆಯ ಆಕಾರದಲ್ಲಿದೆ. ಈಗ ಈ ಮಾಂತ್ರಿಕ ಮದಂತ ರಕ್ತತರ್ಪಣದ ಮಂತ್ರವನ್ನು ಹೇಳುತ್ತಾ ಕುರಿ ಮತ್ತು ಕೋಳಿಗಳ ಕತ್ತನ್ನು ಕತ್ತರಿಸುತ್ತಿದ್ದಾನೆ.

ರಕ್ತ ಹನಿ ಹನಿಯಾಗಿ ಬೀಳುತ್ತಿದೆ ರೂಪ ರಾಮುವಿನ ಗೊಂಬೆಗಳ ಮೇಲೆ. ಕೆಂಪಾಯಿತು ಮಣ್ಣಿನ ಗೊಂಬೆಗಳು. ಈಗ ಜ್ವಾಲೆ ಧಿಗ್ಗನೆ ನುಗ್ಗಿತು. ಈ ಗೊಂಬೆಗಳಲ್ಲಿ ಸೇರಿಕೊಂಡಿತು. ಮಣ್ಣಿನ ಗೊಂಬೆಗಳು ಅಲುಗಾಡುತ್ತಿವೆ. ಗುರು ಮಾಂತ್ರಿಕ ರುದ್ರನಾಗ ತನ್ನ ಶಿಷ್ಯನ ಕಡೆ ಹೆಮ್ಮೆಯಿಂದ ನೋಡಿದನು.

ಒಂದಿನಿತು ಲೋಪ ಬಾರದಂತೆ ಪ್ರಥಮ ಪ್ರಯತ್ನದಲ್ಲೇ ಅನುಭವ ಪಡೆದಿರುವ ಹಿರಿಯ ಮಾಂತ್ರಿಕನಂತೆ ಮದಂತ ಪ್ರಯೋಗವನ್ನು ಯಶಸ್ವಿಯಾಗಿ ಮಾಡಿ ಮುಗಿಸಿದ್ದಾನೆ. ಅವನ ಮನದಲ್ಲಿ ಅನುಕಂಪದ ಅಲೆಗಳು ಅಬ್ಬರಿಸುತ್ತಿವೆ. ಕ್ಷುದ್ರಶಕ್ತಿಗೆ ಬಲಿ ಹೋಗಲಿರುವ ನತದೃಷ್ಟರು ಯಾರು? ಮದಂತನಂತಹ ಮಾಂತ್ರಿಕನಲ್ಲಿ ಅನುಕಂಪ ಇರಬಾರದಿತ್ತು ಬಿಡಿ.

ಮಾರನೆಯ ದಿನ ಬೆಳಿಗ್ಗೆ.

ಊರಿನ ಜನರು ಹೇಳಿದ ಸುದ್ದಿ ಕೇಳಿ ದಿಗ್ಭ್ರಾಂತನಾದನು ಹಸಿರು ಗಿಡಗಳ ರಾಮಯ್ಯ. ಊರಿನ ಹೊರಗಿರುವ ಮಾವಿನ ತೋಪಿನ ಹತ್ತಿರ ಎರಡು ಹೆಣಗಳು ಬಿದ್ದಿವೆ. ರಕ್ತ... ಎಲ್ಲಾ ಕಡೆ ರಕ್ತ. ಹೆಣದ ಗುರುತೇ ಸಿಗುತ್ತಿಲ್ಲ. ಮುಖ ವಿಕಾರಗೊಂಡಿದೆ. ರಕ್ತ ಅಂಟಿರುವುದರಿಂದ ಮತ್ತಷ್ಟು ಭಯಂಕರವಾಗಿ ಕಾಣುತ್ತಿದೆ.

ರೂಪ ರಾಮು

ರಾಮಯ್ಯ ಎದೆ ಬಡಿದುಕೊಂಡು ಅಳುತ್ತಾ ಹೆಣಗಳನ್ನು ತಬ್ಬಿಕೊಳ್ಳಲು ನುಗ್ಗಿದನು. ಊರಿನವರು ಅವನನ್ನು ತಡೆದು ನಿಲ್ಲಿಸಿದರು. ಮುದುಕನೊಬ್ಬ 'ರಾಮಯ್ಯ... ನಿನ್ನ ಮಕ್ಕಳು ಸತ್ತಿರೋದು ಕ್ಷುದ್ರಶಕ್ತಿಯಿಂದ. ಆದ್ದರಿಂದ ಇಪ್ಪತ್ನಾಲ್ಕು ಗಂಟೆಗಳ ಕಾಲ ಹತ್ತಿರ ಹೋಗಬಾರದು. ರಾಮಯ್ಯ ಬೆಚ್ಚಿ ಬಿದ್ದನು. ಇಡೀ ದೇಹ ಅದುರಿಹೋಯಿತು ವಿದ್ಯುತ್ ತಗುಲಿದಂತೆ.

ಕ್ಷುದ್ರಶಕ್ತಿಯ ಪ್ರಯೋಗ.

ಈ ಊರಿನಲ್ಲಿ ಸುತ್ತಮುತ್ತಲಿನ ಪ್ರಾಂತ್ಯದಲ್ಲಿ ಅದನ್ನು ಪ್ರಯೋಗ ಮಾಡಬಲ್ಲ ಸಾಮರ್ಥ್ಯ ಇರುವುದು ಗುರು ಮಾಂತ್ರಿಕ ರುದ್ರನಾಗನಿಗೆ. ಆದರೆ ಅವನಿಂದ ಈ ಕೆಲಸ ಮಾಡಿಸಿರೋದು ಯಾರು? ನೆನಪಾಯಿತು ಈಗ. ಅವನೇ ರಾಜಾರಾಯರು.

ಒಬ್ಬ ಬುದ್ಧಿವಂತ ಸೇಡಿನ ಆವೇಶಕ್ಕೆ ಬಲಿಯಾದರೆ ನಡೆಯಲಿರುವ ಅನರ್ಥ ಮತ್ತು ಅನಾಹುತಗಳು ನಿಶ್ಯಬ್ದವಾಗಿ ನಡೆಯುತ್ತವೆ. ರಾಮಯ್ಯ ಬುದ್ಧಿವಂತ, ಮುಂದಿನದೆಲ್ಲಾ ಮುಸುಕಿನ ಮರೆಯಲ್ಲಿ ಸಣ್ಣ ಶಬ್ದ ಸಹ ಹೊರಬರದಂತೆ ನಡೆಯುತ್ತದೆ. ಆ ಊರಿನಲ್ಲಿ ಯಾರ ಬಾಯಲ್ಲಿ ನೋಡಿದರೂ ಸಹ ಇದೇ ಸುದ್ದಿ. ರಾಜಾರಾಯನ ಮಗ ರೂಪಳನ್ನು ಪ್ರೀತಿಸಿದ್ದರಿಂದ ಅವಳನ್ನು ಶಾಶ್ವತವಾಗಿ ದೂರ ಮಾಡಲು ಮಾಂತ್ರಿಕನಿಗೆ ಹಣ ನೀಡಿ ಈ ಕೆಲಸ ಮಾಡಿಸಿದ್ದಾನೆ. ಆದರೆ ರಾಮುವನ್ನು ಯಾಕೆ ಬಲಿ ತೆಗೆದುಕೊಂಡ ಎಂದು ಜನಗಳಿಗೆ ತಿಳಿಯಲಿಲ್ಲ.

ರಾಜಾರಾಯನ ಕಾನೂನುಬಾಹಿರ ರಹಸ್ಯಗಳನ್ನು ಪತ್ರಕರ್ತನಾದ ರಾಮು ಬಹಿರಂಗಪಡಿಸಲು ಪ್ರಯತ್ನಿಸಿದ್ದರಿಂದಲೇ ಸಾವು ಬಂದಿತ್ತು. ಇದು ಜನಗಳಿಗೆ ತಿಳಿಯದ ರಹಸ್ಯ. ಶವಸಂಸ್ಕಾರ ಮುಗಿದ ಬಳಿಕ ಹಸಿರು ಗಿಡಗಳ ರಾಮಯ್ಯ ಸಮಾಧಿಗಳ ಹತ್ತಿರ ಕಂಬನಿ ಮಿಡಿಯುತ್ತಾ ಕುಳಿತುಕೊಂಡಿದ್ದನು.

ಅದು ಸ್ಮಶಾನ. ತುಸು ದೂರದಲ್ಲಿ ದಕ್ಷಿಣದ ಕಡೆ ಕಂಡಿತು ಆ ಭಯಂಕರ ದೃಶ್ಯ! ಈಗಲೂ ಸಹ ಕೆಂಪು ಛಾಯೆ ಇರುವ ಅಗ್ನಿಕುಂಡ... ತಲೆಬುರುಡೆಗಳು ಕಾಣುತ್ತಿವೆ. ಸತ್ತು ಬಿದ್ದಿರುವ ಕೋಳಿಗಳು. ಕುಂಕುಮದಲ್ಲಿ ಬರೆದಿರೋ ವಿಕಾರ ರೂಪದ ಪಿಶಾಚಿಯ ಆಕಾರ. ಭೂಮಿಯಲ್ಲಿ ಹೂಳಿರುವ ತ್ರಿಶೂಲ. ಅಲ್ಲಿ... ಅಲ್ಲಿ ಕಂಡಿತು ಎರಡು ಮಣ್ಣಿನ ಗೊಂಬೆಗಳು. ಅವು ಈಗ ಬಿರುಕು ಕಂಡಿವೆ. ಗಂಡು... ಹೆಣ್ಣಿನ ಗೊಂಬೆಗಳು.

ರಾಮಯ್ಯನಿಗೆ ಅಲ್ಪಸ್ವಲ್ಪ ವಿಷಯ ತಿಳಿದಿದ್ದರಿಂದ ಅದೇನೆಂದು ಗೊತ್ತಾಯಿತು. ಹಿಂದಿನ ರಾತ್ರಿ ಇದೇ ಸ್ಮಶಾನದಲ್ಲಿ ಮಾಂತ್ರಿಕ ನನ್ನ ಮಕ್ಕಳ ಮೇಲೆ ಪ್ರಯೋಗ ಮಾಡಿದ್ದಾನೆ. ಈಗ ಇದೇ ಸ್ಮಶಾನದ ಮತ್ತೊಂದು ಕಡೆ ನನ್ನ ಮಕ್ಕಳ ಸಮಾಧಿ ಇದೆ.

ಈ ಬದುಕು ಎಷ್ಟೊಂದು ಅನಿಶ್ಚಿತ? ನಿನ್ನೆಯವರೆಗೂ ಸಾವಿನ ಕಲ್ಪನೆಯೇ ಇರದಿದ್ದ ನನ್ನ ಮಕ್ಕಳು ಇಂದು ಅದರ ಮಡಿಲಲ್ಲಿ ಚಿರನಿದ್ರೆಯನ್ನು ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಸ್ವಾರ್ಥ. ಊರಿನ ಅಸಂಖ್ಯಾತ ಮಂದಿಗೆ ಕಾಡಿನ ಹಸಿರು ಗಿಡಗಳಿಂದಲೇ ಔಷಧಿ ನೀಡಿ ಕಾಯಿಲೆಯನ್ನು ಗುಣಪಡಿಸುತ್ತಿದ್ದ ಈ ರಾಮಯ್ಯ.

ಹಸಿರು ಗಿಡಗಳ ರಾಮಯ್ಯ! ಅಳುತ್ತಾ ಎದೆ ಬಡಿದುಕೊಳ್ಳುತ್ತಿದ್ದಾನೆ. ನಿಜ... ಪ್ರಾಯಕ್ಕೆ ಬಂದಿರುವ ಇಬ್ಬರು ಮಕ್ಕಳನ್ನು ಕಳೆದುಕೊಂಡಿರುವ ದುಃಖ ಕಡಿಮೆಯೇನಲ್ಲ.

ಸ್ಮಶಾನ ಮೌನ ತಳೆದಿದೆ. ಅಲ್ಲಿರುವ ಕೆಲವೇ ಮರಗಳು ಈಗ ಸ್ತಬ್ಧಚಿತ್ರದ ರೀತಿಯಲ್ಲಿ ಕಂಡುಬರುತ್ತಿವೆ. ಗಾಳಿಯ ಬೀಸುವಿಕೆ ಮಂದವಾಗಿದೆ. ಮರದಲ್ಲಿನ ಎಲೆಗಳು ಸಹ ಅಲುಗಾಡುತ್ತಿಲ್ಲ. ರೂಪ ಮತ್ತು ರಾಮುವಿನ ಪ್ರೀತಿಯ ಒಡನಾಟ ನೆನಪಾಗುತ್ತದೆ. ಸಮಾಧಿಗಳನ್ನು ಸವರುತ್ತಿದ್ದಾನೆ. ಕಂಬನಿ ಅದರ ಮೇಲೆ ಉದುರುತ್ತಿದೆ. ಮಕ್ಕಳಿಗೆ ತಂದೆಯ ಶ್ರದ್ಧಾಂಜಲಿ.

ಹೆಜ್ಜೆಗಳ ಸಪ್ಪಳ ಕೇಳಿಸಿತು. ಬೆಚ್ಚಿಬಿದ್ದು ಹಿಂತಿರುಗಿದನು. ಅಲ್ಲಿ... ಅಲ್ಲಿ ಶ್ರೀಮಂತಿಕೆಯ ಗತ್ತಿನಿಂದ ಬೀಗುತ್ತಿರುವ ರಾಜಾರಾಯರು ನಿಂತಿದ್ದರು.

(ಸಶೇಷ)